Ref.No.48/2023

MW-1,

ದಿನಾಂಕಃ 15-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 1 ನೇ ಪಾರ್ಟಿ ಪರವಾಗಿಃ ಶ್ರೀ. BSSR ಪ್ರತಿನಿಧಿಯಹುವರಿಂದ

ನಾನು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಯಾಗಿದ್ದೆ ಎಂದರೆ ನಿಜ. ನನ್ನ ವಿಚಾರಣೆಯು ಆರೋಪಣಾ ಪಟ್ಟಿಗೆ ಸೀಮಿತವಾಗಿತ್ತು ಎಂದರೆ ನಿಜ. ಆರೋಪಣಾ ಪಟ್ಟಿಯಲ್ಲಿ ನೀಡಲಾಗಿರುವ ದಾಖಲಾತಿಗಳ ಮೇಲೆ ನಾನು ವಿಚಾರಣೆ ಮಾಡಿದ್ದೆ ಎಂದರೆ ನಿಜ. ಸದರಿ ದಾಖಲಾತಿಗಳಲ್ಲಿ ಅಪಘಾತ ಪ್ರಥಮ ವರದಿ , ವರದಿಗಾರರ ವರದಿಗಳು , ಅಪಘಾತ ಕಚ್ಚಾ ನಕಾಶೆಗಳು ಇದ್ದವು ಎಂದರೆ ನಿಜ. 29-4-2019 ರಂದು ನಾನು ಮೊದಲನೇ ವಿಚಾರಣೆಯನ್ನು ನಡೆಸಿದೆ ಎಂದರೆ ನಿಜ. ಆ ದಿನ 1 ನೇ ಪಾರ್ಟಿಯವರು ಮಾತ್ರ ಹಾಜರಿದ್ದರು ಮಂಡನಾಧಿಕಾರಿಯವರು ಹಾಜರಿರಲಿಲ್ಲ ಆದರೂ ಆದೇಶದ ಹಾಳೆಯಲ್ಲಿ ಅವರು ಹಾಜರಿದ್ದರು ಎಂದು ಬರೆದಿದ್ದೇನೆ ಎಂದರೆ ಸಾಕ್ಷಿಯು ಅವರ ಅವಶ್ಯಕತೆ ಇಲ್ಲ ಎಂದು ಕಂಡುಬಂದಿದ್ದರಿಂದ ಅವರ ಸಹಿಯನ್ನು ಪಡೆದುಕೊಂಡಿಲ್ಲ ಎನ್ನುತ್ತಾರೆ. ಪ್ರಾಥಮಿಕ ವಿಚಾರಣಾ ನಡವಳಿಕೆಗಳಲ್ಲಿ ಅವರ ಸಹಿಯನ್ನು ಪಡೆದುಕೊಂಡಿಲ್ಲ ಎಂದರೆ ನಿಜ. ಅಪಘಾತಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷ ಸಾಕ್ಷಿಗಳನ್ನು ನಾನು ವಿಚಾರಣೆ ಮಾಡಿಲ್ಲ ಎಂದರೆ ನಿಜ. 1 ನೇ ಪಾರ್ಟಿಯವರು ಪ್ರತ್ಯಕ್ಷ ಸಾಕ್ಷಿಗಳನ್ನು ಆಂತರಿಕ ವಿಚಾರಣಾ ಸಮಯದಲ್ಲಿ ಹಾಜರುಪಡಿಸಿದ್ದರು ಮತ್ತು ಅವರನ್ನು ವಿಚಾರಣೆಗೆ ಒಳಪಡಿಸಿ ಪಾಟೀ ಸವಾಲು ಮಾಡಲಾಗಿತ್ತು ಎಂದರೆ ನಿಜ. ನಿರ್ವಾಹಕರೂ ಕೂಡ ಪ್ರತ್ಯಕ್ಷ ಸಾಕ್ಷಿಗಳಾಗಿ ಹೇಳಿಕೆ ಕೊಟ್ಟಿದ್ದಾರೆ ಎಂದರೆ ನಿಜ. ನಿರ್ವಾಹಕರನ್ನು ಪ್ರತ್ಯಕ್ಷ ಸಾಕ್ಷಿಗಳಾಗಿ ಆಂತರಿಕ ವಿಚಾರಣಾ ಸಮಯದಲ್ಲಿ ಹಾಜರುಪಡಿಸಿರಲಿಲ್ಲ ಎಂಬುದು ನಿಜ. ವಿಚಾರಣೆ ಸಮಯದಲ್ಲಿ ವರದಿಗಾರರು ನನ್ನ ಮುಂದೆ 20 ದಾಖಲೆಗಳನ್ನು ಹಾಜರುಪಡಿಸಿದರು ಎಂದರೆ ನಿಜ. ವಿಚಾರಣೆ ಸಮಯದಲ್ಲಿ ಸದರಿ 20 ದಾಖಲಾತಿಗಳ ಪ್ರತಿಗಳನ್ನು 1 ನೇ ಪಾರ್ಟಿಯವರಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರು ಕೇಳಿದರೆ ಕೊಡುತ್ತೇವೆ ಎನ್ನುತ್ತಾರೆ. ಅವರು ಕೇಳಿಲ್ಲ ಆದ್ದರಿಂದ ಕೊಟ್ಟಿಲ್ಲ ಎನ್ನುತ್ತಾರೆ. 1 ನೇ ಪಾರ್ಟಿಯವರ ಸಾಕ್ಷಿ ಜವರಶೆಟ್ಟಿ ಯವರು ಸೇವೆಯಿಂದ ನಿವೃತ್ತಗೊಂಡಿದ್ದ ವ್ಯಕ್ತಿಯಾಗಿದ್ದು ಆದ್ದರಿಂದ ಅವರ ಸಾಕ್ಷ್ಯವನ್ನು ನಂಬಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತೇನೆ. ವರದಿಗಾರರು ಕೊಟ್ಟ ದಾಖಲಾತಿಗಳು ಮತ್ತು ನಡವಳಿಕೆಗಳ ಆಧಾರದಲ್ಲಿ 1 ನೇ ಪಾರ್ಟಿಯವರು ತಪ್ಪಿತಸ್ಥರು ಎಂದು ನಾನು ಅಭಿಪ್ರಾಯ ಪಟ್ಟಿರುತ್ತೇನೆ. ಅದೇರೀತಿಯಲ್ಲಿ ದೋಷಾರೋಪಣಾ ಪಟ್ಟಿಗೆ ನೀಡಿದ ಉತ್ತರ ಮತ್ತು ಸಂರಕ್ಷಣಾ ಹೇಳಿಕೆಯನ್ನು ಪರಿಗಣಿಸದೆ ಏಕಪಕ್ಷೀಯವಾಗಿ ವಿಚಾರಣಾ ನಿರ್ಣಯವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ಪಾರ್ಟಿ ಸಂಸ್ಥೆಯ ಅಧಿಕಾರಿ ಆಗಿರುವುದರಿಂದ ನಮ್ಮ ಸಂಸ್ಥೆಗೆ ಪೂರಕವಾಗಿ ನಡವಳಿಕೆಗಳನ್ನು ನಡೆಸಿ ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

Ref.No.48/2023

MW-1,

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.